# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 194 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-12-2024 |
| ಉತ್ತರಿಸುವ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರ ನಗರಸಭೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೂ ಸ್ವಚ್ಛ ಭಾರತ್ ಮಿಷನ್-1.0 ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ; ಈ ಅನುದಾನವನ್ನು ಯಾವ ಕಾಮಗಾರಿಗೆ ಮತ್ತು ಖರೀದಿಗಳಿಗೆ ಬಳಸಿಕೊಳ್ಳಲಾಗಿದೆ;</td><td>ಸ್ವಚ್ಛ ಭಾರತ್ ಮಿಷನ್ (ನಗರ)-1.0 ಯೋಜನೆಯಡಿಯಲ್ಲಿ ಕೋಲಾರ ನಗರಸಭೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರೂ. 595.66 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ.<br>ಸಂ.</th><th>ವರ್ಷ</th><th>ಬಿಡುಗಡೆಯಾಗಿರುವ ಒಟ್ಟು ಮೊತ್ತ</th></tr>
<tr><td>1</td><td>2021-22</td><td>0.00</td></tr>
<tr><td>2</td><td>2022-23</td><td>595.66</td></tr>
<tr><td>3</td><td>2023-24</td><td>0.00</td></tr>
<tr><td></td><td>ಒಟ್ಟು</td><td>595.66</td></tr>
</table>
ಸದರಿ ಅನುದಾನವನ್ನು ಯಾವ ಯಾವ ಕಾಮಗಾರಿಗೆ ಮತ್ತು ಖರೀದಿಗೆ ಬಳಸಿಕೂಳ್ಳಲಾಗಿದೆ ಎಂಬ ವಿವರಗಳನ್ನುಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಇ.ವಿ. ಚಾರ್ಜಿಂಗ್ ಪಾಯಿಂಟ್ ಸಿ.ಸಿ.ಟಿ.ವಿ. ಕ್ಯಾಮೆರಾ ಖರೀದಿಸಿರುವುದರಲ್ಲಿ ಸುಮಾರು ರೂ. 2.4 ಕೋಟಿಗೂ ಹೆಚ್ಚು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತವರ ಮೇಲೆ ತೆಗೆದುಕೊಂಡ ಕ್ರಮವೇನು;</td><td>ಹೌದು ಬಂದಿದೆ.<br><br>ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ರೂ. 2.40 ಕೋಟಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ;<br><br>(Rs. in Lakh)
<table>
<tr><th>Sl No</th><th>Machinery/ Equipment Details</th><th>Quantity (Nos.)</th><th>Estimated Amount</th></tr>
<tr><td>1</td><td>Electrical Minitipper</td><td>6</td><td>98.00</td></tr>
<tr><td>2</td><td>Tractor Engine</td><td>2</td><td>20.00</td></tr>
<tr><td>3</td><td>Pushcarts</td><td>15</td><td>5.50</td></tr>
<tr><td>4</td><td>Wheel barrow</td><td>12</td><td>3.0</td></tr>
<tr><td>5</td><td>Front end loader with hoe</td><td>1</td><td>48.00</td></tr>
<tr><td>6</td><td>Compactor</td><td>1</td><td>51.00</td></tr>
<tr><td>7</td><td>CC Cameras</td><td>6</td><td>6.50</td></tr>
<tr><td>8</td><td>Charging point for EV Vehicles</td><td>2</td><td>8.00</td></tr>
<tr><td colspan="2">Total</td><td>45</td><td>240.00</td></tr>
</table></td></tr>
</table>

| | | |
|---|---|---|
| | | ಮೇಲ್ಕಂಡ ಕ್ರ.ಸಂ. (1) ರಿಂದ (7) ರವರೆಗೆ ಘಟಕಗಳನ್ನು ನಿಯಮಾನುಸಾರ ದರಗಳ ಅನುಮೋದನೆ ಪಡೆದು ಅಂದಾಜುಪಟ್ಟಿ ತಯಾರಿಸಿ ನಿಯಮಾನುಸಾರ GeM ಪೋರ್ಟಲ್‌ನಲ್ಲಿ ಖರೀದಿಸಿರುತ್ತಾರೆ.<br><br>ಆದರೆ ಕ್ರ.ಸಂ. (8)ರ ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಪಾಯಿಂಟ್ ಗೆ (Charging point for EV Vehicles) ಎಸ್.ಆರ್. ದರಗಳು ಲಭ್ಯವಿಲ್ಲದಿರುವುದರಿಂದ ಕೊಟೇಷನ್ ದರಗಳನ್ನು ಪಡೆದು ಸಕ್ಷಮ ಪ್ರಾಧಿಕಾರದಿಂದ ದರಗಳಿಗೆ ಅನುಮೋದನೆ ಪಡೆದು, ಅದರಂತೆ ಅಂದಾಜುಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಕರೆಯಬೇಕಿರುತ್ತದೆ.<br><br>ಆದರೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರು ನೇರವಾಗಿ ಪ್ಯಾಕೇಜ್ ನಲ್ಲಿಯೇ ಇ.ವಿ. ಚಾರ್ಜಿಂಗ್ ಪಾಯಿಂಟ್ ಅನ್ನು ನಮೂದಿಸಿ ಟೆಂಡರ್ ಕರೆದಿರುತ್ತಾರೆ ಎಂದು ವರದಿ ಮಾಡಿ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರು ಶ್ರೀ ಎ.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ನಗರಸಭೆ ಕೋಲಾರ ಇವರನ್ನು ಅಮಾನತುಗೊಳಿಸುವಂತೆ ಶಿಫಾರಸ್ಸು ಮಾಡಿ ದಿನಾಂಕ: 22-10-2024 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು, ನಿಯಮಾನುಸಾರ ಪರಿಶೀಲಿಸಿ ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ನಗರಸಭೆ ಕೋಲಾರ ರವರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ದಿನಾಂಕ: 02.12.2024 ರಂದು ಸಲ್ಲಿಸಿರುವ ಶಿಸ್ತು ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ: ನಅಇ 84 ಬಿಎಂಎಸ್ 2024(ಇ). ದಿನಾಂಕ: 09.12.2024ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(1)(ಡಿ)ರಡಿ ಶ್ರೀ ಎ.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ), ನಗರಸಭೆ ಕೋಲಾರ ರವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |

<table>
<tr>
<td>ಇ)</td>
<td>ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಇದುವರೆಗೂ ಖರೀದಿ ಮಾಡಲಾಗಿರುವ ಪರಿಕರಗಳು ಯಾವುವು; ಹಾಗೂ ಖರೀದಿ ಮಾಡುವ ಸಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ:</td>
<td>ಸ್ವಚ್ಛ ಭಾರತ ಮಿಷನ್ (ನ) – 1.0 ಯೋಜನೆಯಡಿಯಲ್ಲಿ ಖರೀದಿ ಮಾಡಲಾಗಿರುವ ಪರಿಕರಗಳ ವಿವರ ಈ ಕೆಳಕಂಡಂತಿದೆ.<br><br>1. 06 ಸಂಖ್ಯೆಯ ವಿದ್ಯುತ್ ಚಾಲಿತ ಮಿನಿ ಟಿಪ್ಪರ್‌ಗಳು.<br>2. 02 ಸಂಖ್ಯೆಯ ಟ್ರಾಕ್ಟರ್ ಇಂಜಿನ್‌ಗಳು.<br>3. ತಳ್ಳುಗಾಡಿ (Push Cart) ಗಳು.<br>4. ವೀಲ್ ಬ್ಯಾರೋಗಳು.<br>5. ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ ವಾಹನ.<br>6. ಕಾಂಪ್ಯಾಕ್ಟರ್ ವಾಹನ.<br>7. ಸಿ.ಸಿ. ಕ್ಯಾಮರಾಗಳು.<br><br>ಸದರಿ ಮೇಲ್ಕಂಡ ಪರಿಕರಗಳನ್ನು GeM Portal (Government e-Marketplace) ಮೂಲಕ ಖರೀದಿ ಮಾಡಲಾಗಿರುತ್ತದೆ.</td>
</tr>
<tr>
<td>ಈ)</td>
<td>ಈ ಪರಿಕರಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿತ್ತೆ; ಆಗಿದ್ದರೆ, ಟೆಂಡರ್ ನಲ್ಲಿ ಭಾಗವಹಿಸಿದಂತಹ ಗುತ್ತಿಗೆದಾರರು ಯಾರು ಯಾರು? (ಸಂಪೂರ್ಣ ಮಾಹಿತಿ ನೀಡುವುದು)</td>
<td>ಹೌದು.<br><br>ಸದರಿ ಪರಿಕರಗಳನ್ನು ಸರಬರಾಜು ಮಾಡಲು ಕರೆಯಲಾದ ಟೆಂಡರ್‌ನಲ್ಲಿ ಭಾಗವಹಿಸಿದಂತಹ ಗುತ್ತಿಗೆದಾರರ ವಿವಿರಗಳು ಈ ಕೆಳಕಂಡಂತಿದೆ;
<table>
<tr><th>ಕ್ರ. ಸಂ.</th><th>ಪರಿಕರಗಳು</th><th>ಭಾಗವಹಿಸಿರುವ ಗುತ್ತಿಗೆದಾರರು</th></tr>
<tr><td>ಪ್ಯಾಕೇಜ್-1</td><td>1. ಟ್ರಾಕ್ಟರ್ ಇಂಜಿನ್‌ಗಳು.<br>2. Front End with Back Hoe Loader<br>3. ಕಾಂಪ್ಯಾಕ್ಟರ್ ವಾಹನ,<br>4. ಸಿ.ಸಿ ಕ್ಯಾಮರಾಗಳು,<br>5. charging point for EV vehicles</td><td>1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲೂಷನ್ಸ್.</td></tr>
<tr><td>ಪ್ಯಾಕೇಜ್-2</td><td>1. ವಿದ್ಯುತ್ ಚಾಲಿತ ಮಿನಿ ಟಿಪ್ಪರ್ ವಾಹನ,<br>2. ತಳ್ಳುಗಾಡಿಗಳು<br>3. ವೀಲ್ ಬ್ಯಾರೋಗಳು</td><td>1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲೂಷನ್ಸ್.</td></tr>
</table></td>
</tr>
</table>

(ಕಡತ ಸಂಖ್ಯೆ: ನಅಇ 236 ಸಿಎಸ್‌ಎಸ್ 2024)

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

ಅನುಬಂಧ-1

| Sl. No. | ಕಾಮಗಾರಿ ಹೆಸರು | ಬಿಡುಗಡೆಯಾಗಿ ಖರ್ಚಾಗಿರುವ ಮೊತ್ತ |
|---|---|---|
| 1 | Comprehensive development of Land Fill site | 475.22 |
| 2 | Purchase of 2 Nos Charging point for EV Vehicles of CMC Kolar | 8.00 |
| 3 | Purchase of 15 Nos Pushcart of CMC Kolar | 5.46 |
| 4 | Purchase of 12 Nos Wheel barrow of CMC Kolar | 2.96 |
| 5 | Purchase of 1 No Front end loader with Backhoe of CMC Kolar | 47.27 |
| 6 | Purchase of 1 No Compactor of CMC Kolar | 47.67 |
| 7 | Purchase of 6 Nos CC Cameras of CMC Kolar | 6.49 |
| ಒಟ್ಟು | | 593.07 |